INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -2, March-April, 2023,
PageNo,52-55
Peer -Reviewed, Refereed Journal

# ಮೂಗೂರಿನಲ್ಲಿ ಜೈನ ಧರ್ಮದ ಬೆಳವಣಿಗೆ

ಸ್ವಾಮಿ.ಎಂ.[1]

ತಿರುಮಕೂಡಲು ನರಸೀಪುರದಿಂದ ಸರಿಸುಮಾರು 10 ಕಿಲೋ ಮೀಟರ್ ಆಗ್ನೇಯ ದಿಕ್ಕಿಗೆ ಮೂಗೂರು ಇದೆ. ನರಸೀಪುರ–ಚಾಮರಾಜನಗರ ಹಾಗೂ ಕೊಳ್ಳೇಗಾಲಕ್ಕೆ ಹೋಗುವ ರಸ್ತೆಯಲ್ಲಿದೆ. ಇದೊಂದು ಹೋಬಳಿ ಕೇಂದ್ರ, ಪ್ರಾಚೀನ ಶಾಸನಗಳಲ್ಲಿ ಮೋಗೂರು (ಮೊಗೂರು) ಮೊಗೆಯೂರು, ಮೂಗೂರು ಎಂದೆಲ್ಲ ಕರೆಯುತ್ತಾರೆಂದು ತಿಳಿದುಬರುತ್ತದೆ.[1]

ವಿಶಾಲ ಭಾರತದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಕಲೆ ಮತ್ತು ವಾಸ್ತುಶಿಲ್ಪಗಳು ಬೆಳೆದು ಬಂದಿರುವುದನ್ನು ಗಮನಿಸಬಹುದು. ಅದೇ ರೀತಿ ಧರ್ಮಗಳು ಸಹ ಬೆಳೆದುಬಂದಿದೆ. ಇವು ಆಯಾ ಕಾಲಘಟ್ಟದ ಇತಿಹಾಸದ ಗುರುತಿಸುವಿಕೆಯಲ್ಲಿ ಮಹತ್ವದ ಕುರುಹುಗಳಿವೆ. ವಿಶೇಷವಾಗಿ ಭಾರತದ ರಾಜಮನೆತನಗಳು ಅನುಸರಿಸಿದ ಶೈಲಿ ಪ್ರಪಂಚದಲ್ಲಿಯೇ ವಿಶಿಷ್ಟ ಬಗೆಯವು. ಭಾರತದ ರಾಜಮನೆತನಗಳು ಅನುಸರಿಸಿದ ಧರ್ಮ ಪ್ರಪಂಚದಲ್ಲಿಯೇ ವಿಶಿಷ್ಠವಾದ ಬಗೆಯವು ಎನ್ನಬಹುದು. ಭಾರತದ ಸಂಸ್ಕೃತಿಯ ಜಾಯಮಾನಕ್ಕೆ ಒಗ್ಗಿ ಬಂದ ಧರ್ಮಗಳು ದೇವಾಲಯಗಳು ಇಂದಿಗೂ ರಾರಾಜಿಸುತ್ತಿವೆ. ದೇವಾಲಯಗಳು ಚರಿತ್ರೆಯ ಕಾಲಾನುಕ್ರಮದಲ್ಲಿ ರಾಜಮನೆತನಗಳ ಶ್ರೀಮಂತಿಕೆಯ ಪ್ರತಿಬಿಂಬದಂತೆ ಅರಳಿ ಬಂದಿವೆ. ಕರ್ನಾಟಕ ರಾಜ್ಯ ಭಾರತದ ಸಂಸ್ಕೃತಿಯ ಅಧಿಕೃತ ವಕ್ತಾರನಂತೆ ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಧರ್ಮಗಳು ಆಯಾ ಧರ್ಮದ ಪ್ರತೀಕಗಳಾಗಿವೆ. ಭಾರತ ದೇಶದ ಅತಿಮುಖ್ಯವಾದ ಪ್ರಾಚೀನ ಮತಗಳಲ್ಲಿ ಜೈನಮತವು ಒಂದಾಗಿದೆ. ಈ ಜೈನಮತವು ಬೌದ್ಧಮತಕ್ಕಿಂತಲೂ ಮೊದಲೇ ಇತ್ತೆಂದು ಹೇಳಲು ಸಾಕಷ್ಟು ಆಧಾರಗಳಿವೆ. ಆದರೆ ಗೌತಮಬುದ್ಧನ ಸಮಕಾಲೀನರಾದ ವರ್ಧಮಾನ ಮಹಾವೀರನಿಂದ ಪ್ರಸಿದ್ಧಿಗೆ ಬಂದ ಜೈನ ಪಂಥದ ಇತಿಹಾಸವು ಬೌದ್ಧಮತದ

[1].**ಸಂಶೋಧನಾ ವಿದ್ಯಾರ್ಥಿ,ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.**

ಇತಿಹಾಸಕ್ಕಿಂತ ವಿಭಿನ್ನವಾದುದು. ಜೈನಧರ್ಮವು ನಮ್ಮ ದೇಶದ ಚರಿತ್ರೆಯಲ್ಲಿ ಬೌದ್ಧಮತದಷ್ಟೇ ಪ್ರಾಮುಖ್ಯತೆಯನ್ನು ಪಡೆಯದಿದ್ದರೂ ಅಥವಾ ವಿದೇಶಗಳಲ್ಲಿ ಹರಡದಿದರೂ ತನ್ನ ಉಗಮಸ್ಥಾನವಾದ ಭಾರತ ದೇಶದಲೂ ಶಾಶ್ವತವಾಗಿ ನೆಲೆಸಿದೆ. ಜೈನ ಮತವೂ ತನ್ನದೆ ಆದ ಗೌರವವನ್ನು ಅನಾದಿಕಾಲದಿಂದಲೂ ಕಾಪಾಡಿಕೊಂಡು ಬಂದಿದೆ ಹಾಗೂ ಜೈನಬಸದಿಗಳು ಬೌದ್ಧರ ವಿಹಾರಗಳಿಗಿಂತ ವಿಭಿನ್ನ ರೀತಿಯಾಗಿದೆ. ಹಿಂದೂ ಋಷಿಮುನಿಗಳಂತೆ ಮತ್ತು ಬೌದ್ಧ ಭಿಕ್ಷುಗಳಂತೆ ಜೈನ ಗುರುಗಳು ನಿರ್ಜನವಾದ ಗಿರಿ, ಶಿಖರಗಳು, ವಿಹಾರಗಳಲ್ಲಿ ನೆಲೆಸುತ್ತಿದ್ದರು ಎಂಬುದು ಇತಿಹಾಸ ದಾಖಲೆಗಲಿಂದ ತಿಳಿದುಬರುತ್ತದೆ. ಅದನ್ನು ಗಮನಿಸಿದರೆ ಮೂಗೂರು ಗ್ರಾಮದಲ್ಲಿ ವಿಹಾರಗಳು ಇಲ್ಲದೆ ಇದ್ದರೂ ಕೂಡ ಜೈನ ಬಸದಿಗಳು ಇರುವ ಕುರಿತು ಶಾಸನಗಳ ಹಾಗೂ ಬಸದಿಗಳ ಕುರುಹುಗಳಿವೆ. ಜೈನಧರ್ಮವು ಕರ್ನಾಟಕದ ಇತಿಹಾಸದೊಂದಿಗೆ ಬೆಳೆಯುತ್ತಾ ತನ್ನದೇ ಆದ ಇತಿಹಾಸವನ್ನು ನಿರ್ಮಿಸಿದ್ದವೆಂಬುದಕ್ಕೆ ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ.

ಜೈನಚಾರ್ಯರು ಮತ್ತು ಕರ್ನಾಟಕದ ಅರಸು ಮನೆತನಗಳು ಸಂಬಂಧ ಅರ್ಥಪೂರ್ಣವಾಗಿಯೇ ಬೆಸೆದುಕೊಂಡಂತೆ ಕಾಣಬರುತ್ತದೆ. ಕರ್ನಾಟಕದ ಪ್ರಬಲ ಮತ್ತು ಪ್ರಮುಖ ಅರಸು ಮನೆತನಗಳು ಜೈನಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿವೆ. ಅವರಲ್ಲಿ ಕದಂಬರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರ್ ಸಹ ಜೈನಧರ್ಮಕ್ಕೆ ಪ್ರೋತ್ಸಾಹವನ್ನು ನೀಡಿದ್ದಾರೆ. ಅದೇ ರೀತಿ ಸಾಳ್ವರು, ಚೆಂಗಾಳ್ವರು, ಕೊಂಗಾಳ್ವರು, ಸೌದತ್ತಿಯ ರಟ್ಟರು, ಶಿಲಾಹಾರರು, ಕಾರ್ಕಳದ ಭೈರವರಸರು, ಸಾಮಂತ ಅರಸರಲ್ಲಿಯೂ ಮತ್ತು ತಂಜಾವೂರಿನ ಚೋಳರು ಸಹ ಜೈನಧರ್ಮದ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡಿದ್ದಾರೆ.

ತಲಕಾಡಿನ ಗಂಗರ ಆಡಳಿತದ ಕಾಲಕ್ಕೆ ಜೈನಮತವು ಒಂದು ರೀತಿಯಲ್ಲಿ ಸುವರ್ಣಯುಗವೆನ್ನಬಹುದು. ಗಂಗರ ಕಾಲಕ್ಕೆ ರಾಷ್ಟ್ರಧರ್ಮವಾಗಿ ಮೆರೆದ ಜೈನಧರ್ಮವನ್ನು ಕುರಿತಂತೆ ಎಲ್ಲಿ ಜಿನೇಂದ್ರನ ಪೂಜೆಯಾಗುತ್ತದೆಯೋ ಆ ಪ್ರಾಂತ್ಯ ಅಭಿವೃದ್ಧಿಯಾಗುತ್ತದೆ. ನಗರಗಳ ನಿರ್ಭಯವಾಗಿರುತ್ತದೆ. ರಾಜನು ಊರ್ಜಿತನಾಗುತ್ತಾನೆ ಎಂಬ ಧೋರಣೆಯು ಬೆಳೆಯಿತು. ಹೀಗೆ ಈ ಭಾಗದಲ್ಲಿ ಗಂಗರ ಕಾಲಕ್ಕೆ ಅತ್ಯುನ್ನತಿಗೇರಿದ ಜೈನಧರ್ಮ ತದನಂತರ ಈ ಮನೆತನದ ಪತನದೊಂದಿಗೆ ಬರಿದಾಯಿತೆಂದು ಕಾಣುತ್ತದೆ.

ಒಟ್ಟಾರೆಯಾಗಿ ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮದ ಪ್ರಾಚೀನತೆಯನ್ನು ವೇದಗಳ ಕಾಲದಷ್ಟು ಹಿಂದಕ್ಕೆ ಹೋಗುತ್ತದೆ ಎಂದು ಜೈನರು ಭಾವಿಸುತ್ತಾರೆ. ಭಾಗವತ ಪುರಾಣದಲ್ಲಿ ಮೊದಲನೆಯ ತೀರ್ಥಂಕರನಾದ ವೃಷಭದೇವನ ಉಲ್ಲೇಖ ಬಂದಿದೆ. ಕ್ರಿ.ಪೂ.3ನೇ ಶತಮಾನದಲ್ಲಿ ಮೌರ್ಯವಂಶದ

ಚಕ್ರವರ್ತಿ ಚಂದ್ರಗುಪ್ತ ಮತ್ತು ಆತನ ಗುರು ಭದ್ರಬಾಹು ಹಾಗೂ ಹನ್ನೆರಡು ಸಾವಿರದ ಜಿನಮುನಿಗಳು ಉತ್ತರ ಭಾರತದಲ್ಲಿ ಕ್ಷಾಮ ತಲೆದೋರಿದಾಗ ದಕ್ಷಿಣ ಕರ್ನಾಟಕಕ್ಕೆ ಆಗಮಿಸಿ ಶ್ರವಣಬೆಳಗೊಳದಲ್ಲಿ ತಪಸ್ಸು ಮಾಡಿದರೆಂದು ತಿಳಿದುಬರುತ್ತದೆ. ಅಂದಿನಿಂದ ಕರ್ನಾಟಕದಲ್ಲಿ ಜೈನಧರ್ಮವು ಈ ನಾಡನ್ನಾಳಿದ ಆಳರಸರ ರಾಜಾಶ್ರಯ ಮತ್ತು ಪ್ರೋತ್ಸಾಹದಿಂದಾಗಿ ಅಂದಿನ ಕಾಲದ ಅನ್ಯಧರ್ಮಗಳಿಗಿಂತ ಪ್ರಬಲ ಧರ್ಮವಾಗಿ ಬೆಳೆಯಿತು.

24ನೇ ತೀರ್ಥಂಕರರ ಮರಣಾನಂತರ ಈ ಧರ್ಮದಲ್ಲಿ ಎರಡು ಪಂಗಡಗಳಾದವು. ಅವುಗಳೆಂದರೆ ಶ್ವೇತಾಂಬರ ಮತ್ತು ದಿಗಂಬರ ಕರ್ನಾಟಕದಲ್ಲಿ ಪ್ರಬಲವಾಯಿತು. ಈ ಹಿನ್ನೆಲೆಯನ್ನು ಗಮನಿಸಿದಾಗ ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿಯೂ ಈ ಪಂಥಕ್ಕೆ ಸೇರಿದ ಆದಿನಾಥ ಬಸದಿಯನ್ನು ಕಾಣಬಹುದು. ಈ ಆಧಾರಗಳಿಂದ ಮೂಗೂರಿನಲ್ಲಿ ಗಂಗರ, ಚೋಳರ, ಹೊಯ್ಸಳರ ಕಾಲಕ್ಕೆ ಪ್ರಬಲವಾಗಿ ಬೆಳೆದಿತ್ತು. ಮೂಗೂರು ತಲಕಾಡಿನ ಗಂಗರ ಕಾಲಕ್ಕೆ ಒಂದು ಪ್ರಮುಖ ಜೈನ ಕೇಂದ್ರವಾಗಿತ್ತೆಂದು ಹೇಳಿಕೆಗಳಿವೆ.[2] ಮೂಗೂರಿನ ತಿಬ್ಬಾದೇವಿ ಗುಡಿಯ ಪ್ರಾಕಾರದಲ್ಲಿ ಮೈಸೂರು ಕ್ರಿ.ಶ.10ನೇ ಶತಮಾನಕ್ಕೆ ಸೇರಿದ ಗಂಗ ಶಾಸನವೊಂದರಲ್ಲಿ ಮೂಗೂರಿನ ಸಿವಾಲಯ್ಯನ ಬಸದಿಯ ತೊಯ್ವಬ್ಬೆಯ ಶಿಷ್ಯೆಯಾದ ಅಮ್ಮೀ(ಕ)ಬ್ಬೆ ಕಂತಿಯ ಗತಿಸಿದ ವಿಚಾರವನ್ನು ತಿಳಿಸುತ್ತದೆ.[3]

ಮೂಗೂರಿನಲ್ಲಿ ಹಿಂದೆ ಎರಡು ಜೈನಬಸದಿಗಳಿದ್ದ ವಿಚಾರ ತಿಳಿದುಬರುತ್ತದೆ. ಅಲ್ಲದೆ ಕ್ರಿ.ಶ.12–13ನೇ ಶತಮಾನದ ಶಾಸನಗಳಿಂದ ತಿಳಿದುಬರುತ್ತದೆ. ಪಾರ್ಶ್ವನಾಥ ಬಸದಿಯಲ್ಲಿದ್ದ ಶಾಸನದಿಂದ ಇಂಗಳೇಶ್ವರ ಸಂಘಕ್ಕೆ ಸೇರಿದ ಭಾನುಕೀರ್ತಿ ಪಂಡಿತರು ಕೊಡೆಯಾಲ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದಾಗ ಊರಗೌಡರು ದಾನ ಬಿಟ್ಟ ವಿಚಾರ ತಿಳಿಯುತ್ತದೆ. ನೆರೆಯ ಆದಿನಾಥ ಬಸದಿಯಲ್ಲಿರುವ ಇನ್ನೊಂದು ಶಾಸನ. ಮೂಲಸಂಘಕ್ಕೆ ಸೇರಿದ ಭರತಪಂಡಿತರಿಗೆ ಜಕ್ಕಿಯಬ್ಬೆಯ ಮಗಳು ದಾನ ನೀಡಿರುವ ವಿಚಾರವಿದೆ. ಈ ಶಾಸನಗಳಿಂದ ಎಡೆಯಲ್ಲಿ ಹಿಂದೆ ಇದ್ದ ಎರಡು ಬಸದಿಗಳಲ್ಲೊಂದನ್ನು (ಆದಿನಾಥ) ಸಂಪೂರ್ಣ ನವೀಕರಿಸಲಾಗಿದ್ದು, ಅಲ್ಲಿ ಆದಿನಾಥನು ಸೇರಿದಂತೆ ನಾಲ್ವಾರು ಜಿನಬಿಂಬಗಳಿವೆ.[4] ಸ್ಥಳೀಯರ ಪ್ರಕಾರ ಆದಿನಾಥನನ್ನು ಸ್ಥಳೀಯ ಒಕ್ಕಲಿಗರು ಭೈರವನೆಂದು ನಂಬಿದ್ದಾರೆ.

## ಆದಿನಾಥ ಬಸದಿ

ಮೂಗೂರು ಗ್ರಾಮದಲ್ಲಿ ಪ್ರಾಚೀನ ಕಲದ ಆದಿನಾಥ ಬಸದಿ ಅಥವಾ ವೃಷಭನಾಥ ಬಸದಿ ಎಂದು ಕರೆಯುವ ವಾಡಿಕೆ ಇದೆ. ಈ ಬಸದಿಯನ್ನು ಕ್ರಿ.ಶ.10ನೇ ಶತಮಾನಕ್ಕೆ ನಿರ್ಮಿಸಲಾಗಿದೆ ಎಂದು ತಿಳಿಯಬಹುದಾಗಿದೆ. ಈ ಆದಿನಾಥ ಬಸದಿಯು ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ.

ಮೂಲಸಂಘ, ದೇಸಿಯ ಗಣದ ಪುಸ್ತಕಗಚ್ಛ ಕೊಂದಕೊಂದಾನ್ವ್ಯಾಂಕಿತವಾದ ಈ ಬಸದಿಯ ಮೂಲ ಶಿಲ್ಪವು ಆದಿನಾಥ ತೀರ್ಥಂಕರನಲ್ಲಿ ಈ ಆದಿನಾಥ ಬಸದಿಯು ದುಃಸ್ಥಿತಿ ಹೊಂದಿದೆ. ಕಾರಣ ಮತ್ತೆ ಮತ್ತೆ ಜೀರ್ಣೋದ್ಧಾರವಾಗಿದೆ. ಹೊಸದಾಗಿ ನಿರ್ಮಾಣಗೊಂಡಿರುವ ಈ ಬಸದಿಯ ಮೂಲ ಗರ್ಭಗುಡಿಯಲ್ಲಿ ವೃಷಭನಾಥನ ಶಿಲ್ಪವಿದೆ. ವೃಷಭನಾಥರು ತೀರ್ಥಂಕರರು ಪದ್ಮಾಸನದಲ್ಲಿ ಕುಳಿತಿರುವ ಶಿಲ್ಪವಾಗಿದೆ. ಶುಕನಾಸದ ಭಾಗದಲ್ಲಿ ಇತ್ತೀಚಿನ ಕಾಲದ ತೀರ್ಥಂಕರರುಗಳು ನಿಂತಿರುವ ಶಿಲ್ಪಗಳಾಗಿವೆ.

ಅಲ್ಲದೆ ಪಕ್ಕದಲ್ಲಿಯೇ ಒಂದು ಮಂಟಪವಿದೆ. ಹಿಂದೆ ಇದು ಕೂಡ ಒಂದು ಬಸದಿಯಾಗಿತ್ತು. ಆದರೆ ಪ್ರಸ್ತುತ ದುಃಸ್ಥಿತಿಯಾಗಿದೆ. ಈ ಮಂಟಪದಲ್ಲಿ ಗರ್ಭಗೃಹ ಕಂಡುಬಂದರೂ ಯಾವುದೇ ರೀತಿಯ ಶಿಲ್ಪಗಳಿಲ್ಲ. ಆದರೆ ತೀರ್ಥಂಕರರನ್ನು ಕುಳಿರಿಸಲಾಗಿರುವ ಕಲ್ಲುಪೀಠವಿದೆ. ಈ ದುಃಸ್ಥಿತಿಯ ಬಸದಿಯನ್ನು ಗಮನಿಸಿದರೆ ಗಂಗರ, ಚೋಳರ, ಹೊಯ್ಸಳರ ಕಾಲಕ್ಕೆ ಸೇರಿಸಬಹುದಾದ ಕಂಬಗಳಿವೆ. ಆದಕಾರಣ ಇವುಗಳು ಅತ್ಯಂತ ಪ್ರಾಚೀನತೆಯನ್ನು ದೃಢಪಡಿಸುತ್ತದೆ. ಆದ ಕಾರಣ ಈ ಎಲ್ಲರ ಕಾಲದಲ್ಲಿಯೂ ಬೆಳವಣಿಗೆಯನ್ನು ಹೊಂದಿದೆ ಎಂದು ತಿಳಿಯಬಯಸುತ್ತೇನೆ.

ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿ ಜೈನಧರ್ಮದ ಸಾಕಷ್ಟು ಕುರುಹುಗಳಿವೆ. ಅವುಗಳಲ್ಲಿ ತಲಕಾಡು, ನರಸೀಪುರ, ಚಿದರವಳ್ಳಿ, ನೀಲಸೋಗೆ, ಆಲಗೂಡುಗಳಲ್ಲಿ ಜೈನ ನೆಲೆಗಳಿವೆ. ಮೂಗೂರಿನ ಆದಿನಾಥ ತೀರ್ಥಂಕರಸ್ವಾಮಿಯ ಬಸದಿಯನ್ನು ಮಾತ್ರ ಜೀರ್ಣೋದ್ಧಾರಗೊಳಿಸಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಸಾಕಷ್ಟು ಶಾಸನಗಳು ಕ್ರಿ.ಶ.10ನೇ ಶತಮಾನದ ಕಾಲಕ್ಕೆ ಸೇರಿದ ಶಾಸನಗಳಲ್ಲಿ ಜೈನಮತವನ್ನು ತಿಳಿಯಲು ಸಾಧ್ಯವಾಗಿದೆ.

## ಕೊನೆಟಿಪ್ಪಣಿಗಳು

1. ಎಸ್.ರಾಜೇಂದ್ರಪ್ಪ – ತಿರುಮಕೂಡಲು ನರಸೀಪುರ ತಾಲ್ಲೂಕಿನ ಗ್ಯಾಜೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು, 2010, ಪು.ಸಂ.223.
2. ಎಸ್.ರಾಜೇಂದ್ರಪ್ಪ – ಪೂರ್ವೋಕ್ತ, 2010, ಪು.ಸಂ.223.
3. ಎಫಿಗ್ರಾಫಿಯ ಕರ್ನಾಟಕ ಸಂಪುಟ–5, ತಿರುಮಕೂಡಲು ನರಸೀಪುರ ತಾಲ್ಲೂಕು ಶಾಸನ ಸಂಖ್ಯೆ–279
4. ಎಫಿಗ್ರಾಫಿಯ ಕರ್ನಾಟಕ ಸಂ–5, ತಿರುಮಕೂಡಲು ನರಸೀಪುರ ತಾಲ್ಲೂಕು ಶಾಸನ ಸಂ–280.
5. ಎಸ್.ರಾಜೇಂದ್ರಪ್ಪ – ಪೂರ್ವೋಕ್ತ, 2010, ಪು.ಸಂ.226.